# ‘ಪ್ರೈಸ್‌ಲೆಸ್’ ಫ್ರೇಸರ್!

ಜಾಗತಿಕ ಅಥ್ಲೆಟಿಕ್ಸ್ ಕೂಟದ ಟ್ರ್ಯಾಕ್‌ನಲ್ಲಿ ಫ್ರೇಸರ್ ಪ್ರೈಸ್ ಎನ್ನುವ ಹೆಸರು ಸುವರ್ಣಲೇಪದೊಂದಿಗೆ ಕಂಗೊಳಿಸುತ್ತಿದೆ. ದೋಹಾದಲ್ಲಿ ಕಳೆದ ವಾರ ನಡೆದ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ ಜಮೈಕಾದ ಓಟಗಾರ್ತಿ ಶೆಲ್ಲಿ ಆ್ಯನ್ ಫ್ರೇಸರ್ ಪ್ರೈಸ್ 100 ಮೀಟರ್ ಓಟವನ್ನು ಮಿಂಚಿನ ವೇಗದಲ್ಲಿ ಗೆದ್ದು ಚಿನ್ನದ ಪದಕ ಕೊರಳಿಗೇರಿಸಿಕೊಂಡಳು. 32ರ ಹರೆಯದ ಫ್ರೇಸರ್‌ಗೆ ಇದು ಮೊದಲ ಚಿನ್ನವೇನೂ ಅಲ್ಲ. ವಿಶ್ವ ಕ್ರೀಡಾಕೂಟದಲ್ಲಿ ಇದು ನಾಲ್ಕನೇ ಚಿನ್ನ. 2009, 2013 ಮತ್ತು 2015ರಲ್ಲೂ ಆಕೆ ಮಹಿಳೆಯರ 100 ಮೀಟರ್‌ನಲ್ಲಿ ‘ವೇಗದ ರಾಣಿ’ ಎಂಬ ಕಿರೀಟ ಧರಿಸಿದ್ದಳು. ಆದರೆ ಹಿಂದಿನ ಮೂರು ಚಿನ್ನಗಳಿಗಿಂತ ಈ ಸಲದ ಚಿನ್ನಕ್ಕೆ ಹೊಳಪು ಹೆಚ್ಚು. ಏಕೆಂದರೆ ಇದು ತಾಯಿಯಾದ ಬಳಿಕ ಆಕೆ ಗೆದ್ದ ಮೊದಲ ಜಾಗತಿಕ ಚಿನ್ನದ ಪದಕ. ಕಳೆದ ವರ್ಷ ಇದೇ ಹೊತ್ತಲ್ಲಿ ಮುದ್ದು ಮಗನನ್ನು ಹೆತ್ತು ಬಾಣಂತಿಯಾಗಿ ಮಲಗಿದ್ದ ಫ್ರೇಸರ್ ಪ್ರೈಸ್, ಮತ್ತೆ ಟ್ರ್ಯಾಕ್‌ಗೆ ಮರಳಿ ಚಿನ್ನವನ್ನು ಗೆದ್ದದ್ದು ನೋಡಿ ವಿಶ್ವವೇ ಮೂಗಿಗೆ ಬೆರಳೇರಿಸಿದೆ. 10.71 ಸೆಕೆಂಡ್‌ಗಳಲ್ಲಿ 100 ಮೀಟರ್ ಓಟ ಮುಗಿಸಿದ 32ರ ಹರೆಯದ ಫ್ರೇಸರ್, ಡಬಲ್ ಒಲಿಂಪಿಕ್ಸ್ ಸ್ವರ್ಣ ವಿಜೇತೆಯೆಂದೇ ಖ್ಯಾತಿ ಹೊಂದಿದವಳು. 2013ರಲ್ಲಿ ಮಾಸ್ಕೊ ಒಲಿಂಪಿಕ್ಸ್‌ನಲ್ಲಿ ಇಷ್ಟೇ ಸಮಯದಲ್ಲಿ ಆಕೆ ಚಿನ್ನ ಗೆದ್ದಿದ್ದಳು. ಆದರೆ ಏಳು ವರ್ಷಗಳ ಹಿಂದೆ ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಆಕೆ ಚಿನ್ನ ಗೆದ್ದಾಗ ಇನ್ನೂ 0.01 ಸೆಕೆಂಡ್ ಮುಂಚೆಯೇ ಓಟ ಮುಗಿಸಿದ್ದಳು.



ಕಳೆದ 10 ವರ್ಷಗಳಿಂದ ಮಹಿಳೆಯರ ವೇಗದ ಟ್ರ್ಯಾಕ್‌ನಲ್ಲಿ ಪಾರಮ್ಯ ಮೆರೆದಿರುವ ಫ್ರೇಸರ್‌ಗೆ ‘ಪಾಕೆಟ್ ರಾಕೆಟ್’ ಎಂಬ ಅಡ್ಡಹೆಸರೇ ಇದೆ. ಆಕೆ ಓಟವನ್ನು ಆರಂಭಿಸುವ ಶೈಲಿ, ರಾಕೆಟ್ ನಭದಿಂದ ಚಿಮ್ಮುವ ರಭಸದಂತೆ ಇರುತ್ತದೆ ಎನ್ನುವ ಕಾರಣಕ್ಕಾಗಿ ಈ ಹೆಸರು! ದೋಹಾದಲ್ಲಿ ಕೂಡಾ ಹಾಗೆಯೇ ಆಯಿತು. ಗುಂಡಿನ ಸದ್ದು ಕೇಳಿದಾಕ್ಷಣ ಜಿಂಕೆಯಂತೆ ನೆಗೆದ ಈಕೆ ಆರಂಭದಿಂದಲೇ ಲೀಡ್ ಗಳಿಸಿ, 2ನೇ ಪ್ರತಿಸ್ಪರ್ಧಿಗಿಂತ 20 ಮೀಟರ್ ಮುಂದಕ್ಕೆ ಇದ್ದಳು. ಗುರಿ ತಲುಪುವಾಗಲೂ ಈ ಅಂತರ ಹಾಗೆಯೇ ಇತ್ತು.

ಜಮೈಕಾದ ‘ಕಪ್ಪು ಚಿನ್ನ’ ಫ್ರೇಸರ್‌ಳ ಬಾಲ್ಯ ಹೇಳಿಕೊಳ್ಳುವಂತಹದ್ದೇನೂ ಆಗಿರಲಿಲ್ಲ. ‘ಸಿಂಗಲ್ ಪೇರೆಂಟ್’ ಅಮ್ಮ ಮ್ಯಾಕ್ಸಿನ್, ಕಿಂಗ್‌ಸ್ಟನ್‌ನಲ್ಲಿ ಬೀದಿಬದಿಯ ವ್ಯಾಪಾರಿ. ಅಮ್ಮನೂ ಬಾಲ್ಯದಲ್ಲಿ ಅಥ್ಲೀಟ್ ಆಗಿದ್ದವಳು. ಆದರೆ ಬಡತನದಿಂದಾಗಿ ಓಟ ಮುಂದುವರಿಸಲಿಲ್ಲ. ಫ್ರೇಸರ್‌ಗೆ ಬಾಲ್ಯದಲ್ಲಿ ಎರಡು ಹೊತ್ತಿನ ಊಟಕ್ಕೆ ತತ್ವಾರವಿತ್ತು. ಒಳ್ಳೆಯ ಬಟ್ಟೆಗಳಿರಲಿಲ್ಲ. ಬೆಚ್ಚನೆಯ ಮನೆ ಇರಲಿಲ್ಲ. ಆದರೆ ಮುಂದೊಂದು ದಿನ ಜಗತ್ತಿನ ಅತ್ಯಂತ ವೇಗದ ಓಟಗಾರ್ತಿ ಆಗಲೇಬೇಕೆಂಬ ಬಾಲ್ಯದ ಕನಸು ಮಾತ್ರ ಇತ್ತು! ಹೈಸ್ಕೂಲ್‌ನಲ್ಲಿ ಇದ್ದಾಗಲೇ 100 ಮೀಟರ್ ಓಟದಲ್ಲಿ ವಿಶೇಷ ತರಬೇತಿ ಪಡೆದಳು. 16ರ ಹರೆಯದಲ್ಲಿ ಜಮೈಕನ್ ಸ್ಕೂಲ್ ಚಾಂಪಿಯನ್‌ಶಿಪ್‌ನಲ್ಲಿ 100 ಮೀಟರ್ ಓಟದಲ್ಲಿ ಮೊದಲ ಸ್ಥಾನ ಗೆಲ್ಲುವುದರೊಂದಿಗೆ ‘ಚಿನ್ನದ ಓಟ’ ಶುರುವಾಯಿತು. ಜಮೈಕಾ ಓಟಗಾರರ ಸ್ವರ್ಗ. ಹೈಸ್ಕೂಲ್ ಮಟ್ಟದ ಓಟದ ಸ್ಪರ್ಧೆಗಳನ್ನು ನೋಡಲೆಂದೇ ಅಲ್ಲಿ ಸಾವಿರಾರು ಜನರು ಸೇರುತ್ತಿದ್ದರು. ಘೋಷಣೆ, ಕೂಗಾಟ, ಉತ್ತೇಜನ ಎಲ್ಲವೂ ಅಲ್ಲಿಯ ಓಟಗಾರರಿಗೆ ಚಿರಪರಿಚಿತ.

ಮೊನ್ನೆ ದೋಹಾದಲ್ಲಿ ಫ್ರೇಸರ್ ಗೆದ್ದದ್ದು ಅಂತರರಾಷ್ಟ್ರೀಯ ಮಟ್ಟದ 12ನೇ ಚಿನ್ನದ ಪದಕ. ಚಿನ್ನ ಗೆದ್ದ ಬಳಿಕ, 13 ತಿಂಗಳ ಮುದ್ದು ಮಗ ಜಿಯೋನ್‌ನನ್ನು ಎತ್ತಿ ಹಿಡಿದು ಸಂಭ್ರಮಿಸಿದ ಆಕೆ, ‘ಇದೊಂದು ಕನಸಿತ್ತು. 32ರ ಹರೆಯದಲ್ಲಿ ಮಗುವಿನ ಜೊತೆಗೇ ಚಿನ್ನದ ಪದಕ ಎತ್ತಿಹಿಡಿಯುವ ಕನಸು!’ ಎಂದಾಗ ಕಣ್ಣಲ್ಲಿ ನೀರಾಡುತ್ತಿತ್ತು. ‘ಓಟದ ಹಿಂದಿನ ರಾತ್ರಿ ನಾನು ನಿದ್ರೆ ಮಾಡಿರಲಿಲ್ಲ. ಏಕೆಂದರೆ ಅಂತರರಾಷ್ಟ್ರೀಯ ಟೂರ್ನಿಯೊಂದರಲ್ಲಿ ನಾನು ಭಾಗವಹಿಸಿ ಮೂರು ವರ್ಷಗಳೇ ಆಗಿದ್ದವು. ಹಾಗಾಗಿ ನಿದ್ದೆ ಬರದೇ ಇದ್ದುದು ಸಹಜವೇ ಆಗಿತ್ತು. ಆದರೆ ನನ್ನ ಮಾನಸಿಕ ದೃಢತೆ ಓಟದಲ್ಲಿ ಕೈಹಿಡಿಯಿತು’ ಎನ್ನುವುದು ಆಕೆಯ ಸ್ಪಷ್ಟಮಾತು.

2008ರ ಒಲಿಂಪಿಕ್ಸ್‌ನಲ್ಲಿ 21ರ ಹರೆಯದಲ್ಲೇ ಚಿನ್ನದ ಪದಕ ಗೆದ್ದಾಗ, ಈಕೆಯ ಹೆಸರು ಅಲ್ಲಿದ್ದ ಎಲ್ಲರಿಗೂ ಅಪರಿಚಿತವೇ ಆಗಿತ್ತು. ಈಗ 32ರ ಹರೆಯದಲ್ಲಿ ವಿಶ್ವ ಕೂಟದಲ್ಲಿ 100 ಮೀಟರ್ ಚಿನ್ನ ಗೆದ್ದ ಮೊದಲ ‘ಅಮ್ಮ’ ಈಕೆ. ಹಾಗೆಯೇ 100 ಮೀಟರ್ ಚಿನ್ನ ಗೆದ್ದ ಅತ್ಯಧಿಕ ವಯಸ್ಸಿನ ಮಹಿಳೆಯೂ ಹೌದು.

ಎರಡು ಪ್ರತ್ಯೇಕ ಸಂದರ್ಭಗಳಲ್ಲಿ 100 ಮೀಟರ್ ಓಟದ ಸ್ಪರ್ಧೆಯಲ್ಲಿ ಒಲಿಂಪಿಕ್ಸ್ ಮತ್ತು ವಿಶ್ವಚಾಂಪಿಯನ್– ಎರಡೂ ಚಿನ್ನದ ಪದಕಗಳನ್ನು ಗೆದ್ದ ಮೊದಲ ಮಹಿಳೆ ಫ್ರೇಸರ್. 100 ಮೀಟರ್ ಓಟದಲ್ಲಿ ನಾಲ್ಕು ಸಲ ವಿಶ್ವ ಚಾಂಪಿಯನ್ ಆದ ಮೊದಲ ಮಹಿಳೆಯೂ ಹೌದು. 100 ಮೀ., 200 ಮೀ., 4–100 ಮೀ. ಈ ಮೂರೂ ಸ್ಪರ್ಧೆಗಳಲ್ಲಿ ಒಂದೇ ಕೂಟದಲ್ಲಿ ಚಿನ್ನದ ಪದಕ ಗೆದ್ದ ದಾಖಲೆಯೂ ಈಕೆಯ ಹೆಸರಲ್ಲಿದೆ.

ಜಗತ್ತಿನ ಅತ್ಯಂತ ವೇಗದ ಓಟಗಾರ್ತಿಯರಲ್ಲಿ ಈಕೆಯದ್ದು ನಾಲ್ಕನೇ ಸ್ಥಾನ. ಫ್ಲಾರೆನ್ಸ್ ಗ್ರಿಫಿತ್ ಜಾಯ್ನರ್ 1988ರಲ್ಲಿ 10.49 ಸೆಕೆಂಡ್‌ಗಳಲ್ಲಿ 100 ಮೀಟರ್ ಓಡಿದ್ದು ಈಗಲೂ ಇರುವ ವಿಶ್ವದಾಖಲೆ. ಆದರೆ ‘ಫ್ರೇಸರ್ ಖಂಡಿತವಾಗಿಯೂ ಜಗತ್ತಿನ ಸಾರ್ವಕಾಲಿಕ ಶ್ರೇಷ್ಠ ಮಹಿಳಾ ಸ್ಪ್ರಿಂಟರ್’ ಎನ್ನುವ ‘ಕಾಮೆಂಟ್ರೇಟರ್’ ಮೈಕೆಲ್ ಜಾನ್ಸನ್‌ನ ಉದ್ಗಾರ ಮಾತ್ರ ಸತ್ಯ.

■ **ಬಿಂದು**

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65